ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 149/2023**

**ಫ್ರಾಸಾ- 2 ಚಾಸಾ- 2**

ಸಾಕ್ಷಿದಾರರ ಹೆಸರುಃ : ಅಮಿತ್ ಹೆಚ್ ಕೆ

ತಂದೆಯ ಹೆಸರುಃ : ಕೃಷ್ಣೇಗೌಡ

ವಯಸ್ಸುಃ : 35 ವರ್ಷ

ಉದ್ಯೋಗಃ : ಅರಣ್ಯ ವಲಯಾಧಿಕಾರಿ

ವಾಸ : ಚಿಕ್ಕನಾಯಕನಹಳ್ಳಿ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 17-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2021ರಿಂದ 2023ರವರೆಗೆ ನಾನು ಅರಸೀಕೆರೆ ಅರಣ್ಯ ವಲಯದ ಕಛೇರಿಯಲ್ಲಿ ಅರಣ್ಯ ವಲಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 29-8-21ರಂದು ನಾನು ನನ್ನ ವಸತಿಗೃಹದಲ್ಲಿದ್ದಾಗ ಬೆಳಿಗ್ಗೆ 9-45 ಗಂಟೆಗೆ ಗಂಡಸಿ ಪಿ ಎಸ್ ನ ಚಾಸಾ-14ರವರು ತಮಗೆ ಸದರಿ ಪಿ ಎಸ್ ನ ವ್ಯಾಪ್ತಿನ ನಾಗರಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿರುವ ಬಗ್ಗೆ ಮಾಹಿತಿ ಬಂದಿದೆ, ದಾಳಿಗೆ ಬರಬೇಕಾಗಿ ನನಗೆ ದೂರವಾಣಿ ಮುಖಾಂತರ ತಿಳಿಸಿದರು. ಅದರಂತೆ ನಾನು 11 ಗಂಟೆಗೆ ಸದರ ಪಿ ಎಸ್ ಗೆ ಹೋದೆನು. ನನಗೆ ಅಲ್ಲಿ ನೋಟೀಸನ್ನು ಜಾರಿಗೊಳಿಸಿದರು. ಮಾಹಿತಿಯನ್ನು ತಿಳಿಸಿದರು. ನಂತರ ಅರಸೀಕೆರೆ ತಾಲ್ಲೂಕು ತಹಶೀಲ್ದಾರರು ಸಹ ಠಾಣೆಗೆ ಬಂದರು. 11-30 ಗಂಟೆಗೆ ಠಾಣೆಯಿಂದ ಹೊರಟು ಠಾಣೆಯನ್ನು ಬಿಟ್ಟು ಸದರಿ ಸ್ಥಳವಾದ ನಾಗರಹಳ್ಳಿ ಗ್ರಾಮದ ಶಂಕರ್ ಎಂಬುವವರ ಜಮೀನಿಗೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದಾಗ ಮಧ್ಯಾಹ್ನ ಸುಮಾರು 12 ಗಂಟೆ ಆಗಿತ್ತು. ಅಲ್ಲಿ ಜಮೀನಿನಲ್ಲಿ ಬೆಳೆದಿರುವ ಗಾಂಜಾ

ಗಿಡವನ್ನು ಚಾಸಾ14ರವರು ತೋರಿಸಿದರು. ಆ ಗಿಡ ಸುಮಾರು 2 ವರೆಯಿಂದ 3 ಅಡಿ ಇತ್ತು. ಆ ಜಮೀನಿನಲ್ಲಿ ತೊಗರಿ ಬೆಳೆ ಇತ್ತು. ಅದರ ಮಧ್ಯದಲ್ಲಿ ಈ ಗಿಡಗಳನ್ನು ಬೆಳೆಸಿದ್ದರು. ಹುಡುಕಾಡಿದಾಗ ಸುಮಾರು 4 ಗಿಡಗಳು ಇದ್ದವು. ಅದನ್ನು ನನ್ನ ಅನುಭವದಂತೆ ತರಬೇತಿಯಿಂದ ಪರಿಶೀಲಿಸಿದಾಗ ಅದು ಗಾಂಜಾ ಗಿಡ ಎಂದು ಕಂಡುಬಂತು. ಅವುಗಳನ್ನು ಚಾಸಾ-14ರವರು ಬೇರುಸಮೇತ ಕೀಳಿಸಿ ಡಿಜಿಟಲ್ ತೂಕಮಾಪನದಲ್ಲಿ ತೂಕಮಾಡಿದಾಗ ಅದು 1 ಕೆ ಜಿ 900ಗ್ರಾಂ ಇತ್ತು. ಆ ಗಿಡಗಳನ್ನು ಬೆಳೆಸಲು ಬಳಸಿದ್ದ ಒಂದು ಮಗ್ ಮತ್ತು ಬಕೇಟ್ ಇತ್ತು. ಇವೆಲ್ಲವನ್ನು ಚಾಸಾ-14ರವರು ವಶಪಡಿಸಿಕೊಂಡು ಪಂಚನಾಮೆ ನಡೆಸಿದರು. ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ನಿಪಿ-2 ಆ ಪಂಚನಾಮೆ ಆಗಿರುತ್ತದೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-2(ಬಿ) ಎಂದು ಗುರುತಿಸಲಾಯಿತು. ನನಗೆ ನೀಡಿದ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1 ಆಗಿರುತ್ತದೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಆ ಬಗ್ಗೆ ಫೋಟೋ ಕೂಡ ತೆಗೆಸಿದರು. ಅದು ಈಗ ನಾನು ನೋಡುತ್ತಿರುವ ನಿಪಿ-3 ರಿಂದ 15 ರ ಫೋಟೋಗಳಾಗಿರುತ್ತದೆ. ಶಂಕರ್ ರವರನ್ನು ನೋಡಿದರೆ ಗುರುತಿಸುತ್ತೇನೆ. ಅವರು ನ್ಯಾಯಾಲಯದ ಮುಂದೆ ಇದ್ದಾರೆ. ವಶಪಡಿಸಿಕೊಂಡ ಗಾಂಜಾ, ಒಂದು ಮಗ್ ಹಾಗೂ ಬಕೇಟ್ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಈಗ ತೋರಿಸಿದ ಕೊಡಲಿಯನ್ನು ವಶಪಡಿಸಿಕೊಂಡಿದ್ದನ್ನು ನಾನು ನೋಡಿಲ್ಲ. ಈಗ ತೋರಿಸಿದ ಎಂ.ಒ.3 ರ ಬಿಂದಿಗೆ ಆ ದಿವಸ ವಶಪಡಿಸಿಕೊಂಡಿರುತ್ತಾರೆ. ವಶಪಡಿಸಿಕೊಂಡ ಗಾಂಜಾವನ್ನು ಈಗ ನೋಡುತ್ತಿದ್ದು ಅದು ನ್ಯಾಯಾಲಯದ ಮುಂದಿರುವ ಎಂ.ಒ.1 ಆಗಿರುತ್ತದೆ. ಗಾಂಜಾಗಿಡಗಳನ್ನು ಕಿತ್ತು ತೂಕ ಮಾಡಿ ನಂತರ ಅದನ್ನು ಚೀಲದಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿರುತ್ತಾರೆ. ಸುಮಾರು 15ಸಾವಿರ ರೂಪಾಯಿ ಮೌಲ್ಯದ ಗಾಂಜಾವನ್ನು ವಶಪಡಿಸಿಕೊಂಡಿರುತ್ತಾರೆ. ಆ ಗಿಡಗಳು 2ವರೆಯಿಂದ 3 ಮೀಟರ್ ಎತ್ತರವಾಗಿದ್ದವು. ಆ ಗಿಡಗಳು ಅಲ್ಲಲ್ಲಿ ನೆಟ್ಟಿದ್ದಾಗಿತ್ತು. ಒಂದೇ ಕಡೆ ಇರಲಿಲ್ಲ.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಎಂ ಎ ಎಂ **ವಕೀಲರಿಂದಃ**

ನನಗೆ ಕರೆ ಮಾಡಿದಾಗ ಸುಮಾರು 10 ಗಂಟೆ ಆಗಿತ್ತು. ನಾನು ವಸತಿಗೃಹದಲ್ಲಿದ್ದೆನು. ನೇರವಾಗಿ ಪೊಲೀಸ್ ಠಾಣೆಗೆ ಹೋದೆನು. ಆಗ ಸಮಯ ಸುಮಾರು 11-15ಗಂಟೆ ಆಗಿತ್ತು. ನಾನು

ಒಬ್ಬನೇ ಹೋದೆನು, ನಂತರ ತಹಶೀಲ್ದಾರರು ಬಂದರು. ನನಗೆ ಫೋನ್ ಮಾಡಿ ತಿಳಿಸಿದರು. ಠಾಣೆಗೆ ಹೋದಾಗ ನೋಟೀಸು ಕೊಟ್ಟರು. ಠಾಣೆಯಿಂದ ನಾನು, ತಹಶೀಲ್ದಾರರು, ಚಾಸಾ-14ರವರು ಮತ್ತು ಅವರ ಸಿಬ್ಬಂದಿಗಳು ಸೇರಿ 7-8 ಜನರು 3 ಜೀಪಿನಲ್ಲಿ ಹೋಗಿದ್ದೆವು. ನಾನು ತಹಶೀಲ್ದಾರರ ಜೀಪಿನಲ್ಲಿ ಹೋದೆನು. ಸ್ಥಳಕ್ಕೆ ಹೋದಾಗ 11-45 -12 ಗಂಟೆ ಆಗಿತ್ತು. ಆ ಜಮೀನಿನಿಂದ 10-20 ಮೀಟರ್ ದೂರದಲ್ಲಿ ವಾಹನವನ್ನು ನಿಲ್ಲಿಸಿದೆವು. ಆ ಸ್ಥಳಕ್ಕೆ ಹೋಗುವುದಕ್ಕಿಂತ ಮುಂಚೆ ನಮ್ಮ ಅಂಗಶೋಧನೆ ಆಗಿರಲಿಲ್ಲ. ವಾಹನದ ಶೋಧನೆ ನನ್ನ ಸಮಕ್ಷಮದಲ್ಲಿ ಮಾಡಿಲ್ಲ. ತೂಕಮಾಪನ ಯಾವ ಕಂಪೆನಿಗೆ ಸೇರಿದ್ದೆಂದು ಗೊತ್ತಿಲ್ಲ. 1ನೇ ಆರೋಪಿಯನ್ನು ಪೊಲೀಸರು ನನ್ನ ಸಮಕ್ಷಮದಲ್ಲಿ ವಿಚಾರ ಮಾಡಿದರು. ಆರೋಪಿಯು ಯಾರು ಹಾಕಿದ್ದೆಂದು ನನಗೆ ಗೊತ್ತಿಲ್ಲ, ಕಾನೂನು ಮಾಹಿತಿ ಇಲ್ಲದೆ ಹಾಕಿದ್ದೇನೆಂದು ಮಾತನಾಡಿದರು. ಅದು ನಾಗರಹಳ್ಳಿ ಗ್ರಾಮದ ಜಮೀನು, ಸರ್ವೆ ನಂಬರ್ ಗೊತ್ತಿಲ್ಲ. ಆ ಜಮೀನಿನಲ್ಲಿ ಹುರುಳಿ ಗಿಡಗಳಿದ್ದವು. ಪಪ್ಪಾಯ ಮತ್ತಿತರಗಿಡಗಳಿದ್ದವು. ಆ ಜಾಗ ಅಂದಾಜು 10 ಗುಂಟೆ ಇತ್ತು. ಆ ಜಾಗದಲ್ಲಿ ಮೊದಲನೇ ಗಿಡ ರಸ್ತೆಯಿಂದ ಹೋಗುವಾಗ ಆ ಜಮೀನಿನಲ್ಲಿ ಪೂರ್ವಭಾಗದಲ್ಲಿ ಮೊದಲೇ ಇತ್ತು. ರಸ್ತೆಯಿಂದ 15 ರಿಂದ 20 ಅಡಿ ದೂರದಲ್ಲಿ ಆ ಜಮೀನು ಇತ್ತು. ಆ ಗಿಡ ಸುಮಾರು 2 ಮೀಟರ್ ಎತ್ತರ ಇತ್ತು. ಆ ಗಿಡವನ್ನು ಅಳತೆ ಮಾಡಿಲ್ಲ. ಅಂದಾಜಿನಲ್ಲಿ ಹೇಳಿರುತ್ತೇನೆ. ಆ ಗಿಡಗಳಿಗೆ ಪಾತಿ ಮಾಡಿದ್ದರು. ಸುತ್ತ ಅರ್ಧ ಅಡಿ ಪಾತಿ ಮಾಡಿದ್ದರು. ಈ ವಿಚಾರವನ್ನು ಮಹಜರಿನಲ್ಲಿ ಕಾಣಿಸಿಲ್ಲ.

2.ನಿಪಿ-3 ರಿಂದ 16ರ ಫೋಟೋಗಳಲ್ಲಿ ಪಾತಿ ಮಾಡಿದಂತೆ ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಫೋಟೋದಲ್ಲಿ ಹೇಳಲಾಗುವುದಿಲ್ಲ, ಸ್ಥಳದಲ್ಲಿತ್ತು ಎನ್ನುತ್ತಾರೆ. ಮೊದಲನೇ ಗಿಡದಿಂದ ಉತ್ತರಕ್ಕೆ 6 ಅಡಿ ದೂರದಲ್ಲಿ 2ನೇ ಗಿಡ ಇತ್ತು. ಆ ಗಿಡ 2 ರಿಂದ 3 ಅಡಿ ಎತ್ತರ ಇತ್ತು. ಪೊಲೀಸ್ ಸಿಬ್ಬಂದಿಗಳಿಂದ ಅದನ್ನು ಕೀಳಿಸಿದರು. ಪ್ರತಿಯೊಂದು ಗಿಡವನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ. 3ನೇ ಗಿಡ 2ನೇ ಗಿಡದಿಂದ ಪಶ್ಚಿಮ ದಿಕ್ಕಿಗೆ 3-4 ಅಡಿದೂರದಲ್ಲಿ ಇತ್ತು. ಅದು 3-4 ಅಡಿ ಎತ್ತರ ಇತ್ತು. ಆ ಗಿಡವನ್ನು ಕೂಡ ಪ್ರತ್ಯೇಕವಾಗಿ ತೂಕ ಮಾಡಲಿಲ್ಲ.

(ಈ ಹಂತದಲ್ಲಿ ಬೆಳಗಿನ ಕಲಾಪ ಮುಗಿದದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು

ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಎಂ ಎ ಎಂ ವಕೀಲರಿಂದಃ**

3.3ನೇ ಗಿಡ ಅದರ ಅಕ್ಕಪಕ್ಕದಲ್ಲಿ ಏನಿತ್ತು ಎಂದರೆ ಸಾಕ್ಷಿಯು 1 ಅಡಿ ದೂರದಲ್ಲಿ ಪಪ್ಪಾಯ ಗಿಡ ಹಾಗೂ ಕಬ್ಬಿನ ಗಿಡ ಇತ್ತು ಎನ್ನುತ್ತಾರೆ. 3ನೇ ಗಿಡದ ಉತ್ತರ ದಿಕ್ಕಿಗೆ 3 ಅಡಿ ದೂರದಲ್ಲಿ 4ನೇ ಗಿಡ ಇತ್ತು. ಅದು 2ವರೆಯಿಂದ 3 ಅಡಿ ಎತ್ತರ ಇತ್ತು. ಆ 4 ಗಿಡಗಳನ್ನು ಕಿತ್ತು ಮಣ್ಣುಸಮೇತ ತೂಕ ಮಾಡಿದಾಗ 1 ಕೆಜಿ 920ಗ್ರಾಂ ಇತ್ತು. ಅವೆಲ್ಲವನ್ನು ಒಂದು ಚೀಲದಲ್ಲಿ ಹಾಕಿ ಮಹಜರು ಮಾಡಿ ವಶಪಡಿಸಿಕೊಂಡರು. ಚೀಟಿಯಲ್ಲಿ ನನ್ನ ಸಹಿ ಪಡೆದುಕೊಂಡು ಆ ಚೀಲಕ್ಕೆ ಅಂಟಿಸಿರುತ್ತಾರೆ. ಅದು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಗೊತ್ತಿಲ್ಲ. ಬಿಂದಿಗೆ ಪಪ್ಪಾಯ ಗಿಡದ ಬಳಿ ಇತ್ತು. 3ನೇ ಗಾಂಜಾ ಗಿಡದಿಂದ 2 ಅಡಿ ದೂರದಲ್ಲಿದ್ದ ಪಪ್ಪಾಯ ಗಿಡದ ಬಳಿ ಇತ್ತು. ಅದು ಯಾವ ಬಿಂದಿಗೆ ಎಂದರೆ ನೀರಿನ ಕೊಡ, ಬಣ್ಣ ನೆನಪಿಲ್ಲ ಎನ್ನುತ್ತಾರೆ. ಎಂ.ಓ-3 ಬಿಂದಿಗೆ ಹೊಸದಾಗಿ ಕಾಣುತ್ತಿದೆ ಎಂದರೆ ಸರಿಯಲ್ಲ. ಅದರಲ್ಲಿ ಯಾವುದೇ ಮಣ್ಣು ತಾಗಿಲ್ಲ ಹಾಗೂ ಹೊಸದಾಗಿ ಕಂಡುಬರುತ್ತಿದೆ ಎಂದರೆ ಸಾಕ್ಷಿಯು ತೊಳೆದಿರಬಹುದು ಎನ್ನುತ್ತಾರೆ. ನನ್ನ ಸಮಕ್ಷಮ ಅದನ್ನು ತೊಳೆದಿಲ್ಲ. ಯಾವ ಬಣ್ಣದ ಬಿಂದಿಗೆ ಎನ್ನುವುದನ್ನು ಮಹಜರಿನಲ್ಲಿ ನಮೂದು ಮಾಡಿಲ್ಲ. ಗುದ್ದಲಿ ಪಪ್ಪಾಯ ಗಿಡದ ಬಳಿ ಇತ್ತು. ಯಾವ ತರಹದ ಗುದ್ದಲಿ ಎಂದು ಮಹಜರಿನಲ್ಲಿ ಕಾಣಿಸಿಲ್ಲ. ಆ ಜಮೀನಿನ ಸರ್ವೆ ನಂಬರು ಎಷ್ಟೆಂದು ತನಿಖಾಧಿಕಾರಿ ತಹಶೀಲ್ದಾರರಿಂದ ಮಾಹಿತಿ ಪಡೆದುಕೊಂಡರಾ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಿಂದ 15ರಲ್ಲಿ ಮೊದಲನೆ ಗಿಡ ಯಾವುದು 2ನೇ ಗಿಡ, 3 ನೇ ಗಿಡ ಯಾವು ಯಾವುದೆಂದು ಹೇಳಲಾಗುವುದಿಲ್ಲ ಎಂದರೆ ಸರಿ. ಆ ಫೋಟೋಗಳನ್ನು ಅದನ್ನು ತೆಗೆದ ದಿನಾಂಕದ ನಮೂದನೆ ಇಲ್ಲ ಎಂದರೆ ಸರಿ. ಪೊಲೀಸ್ ಸಿಬ್ಬಂದಿಗಳು ಅದನ್ನು ತೆಗೆದಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಅದು

ಪೊಲೀಸ್ ಇಲಾಖೆಯ ಕ್ಯಾಮೆರಾ.

4.ಮೊದಲನೆ ಗಿಡದ 4 ಬದಿಯಲ್ಲಿ ಏನಿತ್ತೆಂದರೆ ನನಗೆ ಹೇಳಲಾಗುವುದಿಲ್ಲ. ಉಳಿದ ಗಿಡಗಳ ನಾಲ್ಕೂ ಬದಿಯಲ್ಲಿ ಏನಿತ್ತೆಂದು ಸಹ ನನಗೆ ಹೇಳಲಾಗುವುದಿಲ್ಲ. ಮಹಜರಿಗೆ ನಾನು ಮತ್ತು ತಹಶೀಲ್ದಾರ್ ಅಲ್ಲದೆ ಶ್ರೀನಿವಾಸ್ ಮತ್ತು ರಮೇಶ್ ಎನ್ನುವ ಇಬ್ಬರು ಪಂಚರು ಸಹಿ ಹಾಕಿರುತ್ತಾರೆ. ದಿನಾಂಕ 29-8-21ರಂದು ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಅಲ್ಲಿ ಯಾವುದೇ ಗಾಂಜಾ ಗಿಡಗಳನ್ನು ವಶಪಡಿಸಿಕೊಂಡಿಲ್ಲ ಅವುಗಳನ್ನು ವಶಪಸಿಕೊಂಡದ್ದೂ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಗೆ ಮಾತು ಬರಲ್ಲ, ಆದ್ದರಿಂದ ಆತ ನಮ್ಮ ಮುಂದೆ ಸಂಜ್ಞೆ ಮಾಡಿ ತೋರಿಸುತ್ತಿದ್ದರು ಎಂದರೆ ಸರಿಯಲ್ಲ. ಅವರು ಯಾುವುದೇ ರೀತಿ ಸಂಜ್ಞೆ ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಎಂ.ಒ.1 ರಿಂದ 3ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗದಿದದ್ದಿರೂ ಸಹ ಪೊಲಿಸರು ಠಾಣೆಯಲ್ಲಿ ಮಾಡಿದ ಮಹಜರಿಗೆ ಸಹಿ ಹಾಕಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**